ದಿನಾಂಕ 18/08/2025 (93)
(S1/... - 11)
1561-72-11



**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ. ನಾಗರಾಜುರವರು ನಿಯಮ 72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ವಿಷಯ:** ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ (BIMS) ಆಸ್ಪತ್ರೆಯಲ್ಲಿ ನಿಯಮಿತವಾಗಿ ನವಜಾತ ಶಿಶುಗಳು ಮೃತಪಡುತ್ತಿದ್ದು, ಇದಕ್ಕೆ ಮೂಲ ಕಾರಣಗಳು ಶಿಶುಗಳಿಗೆ ಸೋಂಕು, ಉಸಿರಾಟ ಸಂಬಂಧಿತ ಜಟಿಲತೆ, ಹೃದಯ ಸಮಸ್ಯೆಗಳು, ಇದೆಲ್ಲಾ ವೈದ್ಯಕೀಯ ಕಾರ್ಯದಾಕ್ಷಿಣ್ಯ ಮೀರಿದ ನಿರ್ಲಕ್ಷ್ಯವೇ ಈ ಸರಣಿ ಅನಾಹುತಗಳಿಗೆ ಕಾರಣವೆಂದು ಜನಾಕ್ರೋಶ ವ್ಯಕ್ತವಾಗಿದ್ದು, ಇತರೇ ಸಮಸ್ಯೆಗಳಾದ ವೈದ್ಯರ ಕೊರತೆ, ತೀವ್ರ ನಿಘಾ ಘಟಕಗಳು ಸರಿಯಾಗಿ ಕಾರ್ಯನಿರ್ವಹಿಸದೇ ಇರುವುದು, ಸಿಸೇರಿಯನ್ ಶಸ್ತ್ರಚಿಕಿತ್ಸೆಯಾದ ಗರ್ಭಿಣಿ ಮಹಿಳೆಯರಿಗೆ ಸರಿಯಾದ ಆರೈಕೆ ಮತ್ತು ಅವಶ್ಯಕತೆಗಳನ್ನು ಪೂರೈಸದೇ ಇರುವುದು, ಪದೇ ಪದೇ ವಿದ್ಯುತ್ ಕಡಿತ ಮತ್ತು ಪರ್ಯಾಯ ವ್ಯವಸ್ಥೆ ಇಲ್ಲದೇ ರೋಗಿಗಳು ಪರದಾಡುತ್ತಿರುವುದು ಮತ್ತು ಆಸ್ಪತ್ರೆ ಆವರಣದಿಂದ ಜನೌಷಧಿ ಕೇಂದ್ರಗಳನ್ನು ಶಾಶ್ವತವಾಗಿ ತೆಗೆದು ಹಾಕಿರುವುದು ಹಾಗೂ ಲೋಕಾಯುಕ್ತ ಅಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿದಾಗ ಒಂದು ವರ್ಷಕ್ಕಿಂತ ಹೆಚ್ಚು ಅವಧಿ ಮೀರಿದ ಬಹಳಷ್ಟು ಔಷಧಿಗಳು ಇನ್ನೂ ಬಳಕೆಯಲ್ಲಿರುವುದು ಕಂಡುಬಂದಿದ್ದು ಮತ್ತು District Drug Warehouse ನಲ್ಲಿ ಹಲವಾರು ಔಷಧಿಗಳು ಅವಧಿ ಮೀರಿದ ಔಷಧಿಗಳು Warehouse ನಲ್ಲಿ ದಾಸ್ತಾನು ಮಾಡಿಲಾಗಿರುವುದ ಕಂಡುಬಂದಿರುವ ಕುರಿತು ವರದಿ ಸಲ್ಲಿಸಲಾಗಿರುವುದ್ದು, ಈ ಎಲ್ಲಾ ಸಮಸ್ಯೆಗಳ ಕುರಿತು.

**ಉತ್ತರ: -**

ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ (BIMS) ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರುವ ಶಿಶುಗಳು ವೈದ್ಯಕೀಯ ಕರ್ತವ್ಯ ನಿರ್ಲಕ್ಷ್ಯತೆಯಿಂದ ಮೃತ ಪಟ್ಟಿರದೇ, ಈ ಕೆಳಕಂಡ ಕಾರಣಗಳಿಂದ ಮೃತ ಪಟ್ಟಿರುತ್ತಾರೆ.

| Sl. No | Causes for Admission | No of Admission (%) | No of Death (%) |
|---|---|---|---|
| 1 | Respiratory Distress syndrome | 73 (11.37%) | 20 (51.29%) |
| 2 | Meconium aspiration syndrome | 21 (3.27%) | 3 (7.69%) |
| 3 | Other causes of respiratory distress | 8 (1.24%) | 0 |
| 4 | HIE/Moderate-Severe Birth Asphyxia | 38 (5.91%) | 4 (10.25%) |
| 5 | Sepsis/Pneumonia/Meningitis | 24 (3.79%) | 3 (7.69%) |
| 6 | Major Congenital Malformation | 24 (3.79%) | 4 (10.25%) |
| 7 | Jaundice requiring phototherapy | 269 (0.42%) | 2 (5.13%) |
| 8 | Hypothermia | 0 | 0 |
| 9 | Hypoglycemia | 0 | 0 |
| 10 | Others | 185 (28.8%) | 3(7.69%) |
| | Total | 642 | 39 (6.07%) |

ಬಿಮ್ಸ್ ಆಸ್ಪತ್ರೆ ಬೆಳಗಾವಿಯ ಎಸ್‌ಎನ್‌ಸಿಯು ನಲ್ಲಿ ತ್ರೈಮಾಸಿಕವಾಗಿ (ಏಪ್ರೀಲ್-ಜೂನ್-2025) ಮರಣ ಹೊಂದಿದವರ ಸಂಖ್ಯೆ ಶೇ 6.07 ಆಗಿದ್ದು ಬೆಳಗಾವಿ ಜಿಲ್ಲೆಯಲ್ಲಿ ನವಜಾತ ಶಿಶುವಿನ ಮರಣ ಸಂಖ್ಯೆ:7.72 ಆಗಿದ್ದು, ಕರ್ನಾಟಕ ರಾಜ್ಯದಲ್ಲಿ ಶೇಕಡಾ 7.97 ಆಗಿರುತ್ತದೆ. ಸದರಿ ಮರಣಗಳ ಕುರಿತು ಎಚ್ಚರಿಕೆ ವಹಿಸಲು ಪ್ರತಿ ತಿಂಗಳು Neonatal Death Audit ಅನ್ನು ಸಂಸ್ಥೆಯ ವೈದ್ಯಕೀಯ ಅಧೀಕ್ಷಕರು, ಜಿಲ್ಲಾ ಶಸ್ತ್ರ ಚಿಕಿತ್ಸಕರು, ಸ್ಥಳೀಯ ವೈದ್ಯಾಧಿಕಾರಿಗಳು, ಮಕ್ಕಳ ಮತ್ತು ಸ್ತ್ರೀರೋಗ ವಿಭಾಗದ ವೈದ್ಯರು,

ಪರಿಚಾರಿಕಾ ಅಧಿಕಾರಿ ಮತ್ತು ಶುಶ್ರೂಷಾಧಿಕಾರಿಳನೊಳ್ಳಗೊಂಡು ಸಭೆ ನಡೆಸಿ ಅಗತ್ಯ ಕ್ರಮವಹಿಸಲಾಗುತ್ತಿದೆ.

ಎನ್.ಎಂ.ಸಿ ನಿಯಮಾವಳಿಯಂತೆ ಅಗತ್ಯವಿರುವ ಹುದ್ದೆಗಳನ್ನು ಸೃಜಿಸಲು ಕ್ರಮವಹಿಸಲಾಗುತ್ತಿದೆ. ಸಂಸ್ಥೆ ತೀವ್ರ ನಿಘಾ ಘಟಕಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಈ ಕುರಿತು ಮುಸ್ಕಾನ್ (MUSQAN) ಮೌಲ್ಯಮಾಪನ ಇವರಿಂದ ಮಕ್ಕಳ ವಿಭಾಗಕ್ಕೆ ಕ್ವಾಲಿಟಿ ಪ್ರಮಾಣಪತ್ರ ನೀಡಿದ ಮತ್ತು ರಾಷ್ಟ್ರ ಮಟ್ಟದ ಲಕ್ಷ್ಯ (LAQSHYA) ಮೌಲ್ಯಮಾಪನ ಇವರಿಂದ ಬಿಮ್ಸ್ ಆಸ್ಪತ್ರೆಯನ್ನು ಪ್ಲಾಟಿನಮ್ ಕ್ಯಾಟಗರಿಗೆ ಸೇರಿಸಿದೆ.

ಸಿಸೇರಿಯನ್ ಶಸ್ತ್ರಚಿಕಿತ್ಸೆಯಾದ ಗರ್ಭಿಣಿ ಮಹಿಳೆಯರಿಗೆ ಅವಶ್ಯಕವಿರುವ ಎಲ್ಲ ಆರೈಕೆ ಪೂರೈಸಲಾಗುತ್ತಿದೆ. ಬೆಳಗಾವಿ ಜಿಲ್ಲೆಗೆ ಬಿಮ್ಸ್ ಸಂಸ್ಥೆ ಅತಿ ದೊಡ್ಡ ರೆಫರಲ್ ಸಂಸ್ಥೆಯಾಗಿದ್ದು, ಶೇಕಡಾ 50% ರಷ್ಟು ಸಿಸೇರಿಯನ್ ಶಸ್ತ್ರಚಿಕಿತ್ಸೆಯನ್ನು ನೀಡಲಾಗುತ್ತದೆ. ಹೈರಿಸ್ಕ ಗರ್ಭಿಣಿಯರಿಗೆ OICU/HDU ಸೇವೆಯನ್ನು ನೀಡಲಾಗುತ್ತದೆ. ಪ್ರತಿ ವರ್ಷ ಸರಾಸರಿ 8000 ಹೆರಿಗೆಗಳಾಗುತ್ತಿದ್ದು, ಸುಮಾರು ಅರ್ಧಕ್ಕಿಂತ ಮೇಲ್ಪಟ್ಟು ಸಿಸೇರಿಯನ್ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ.

ಸಂಸ್ಥೆಯಲ್ಲಿ ಹೈ ಪವರ್ ಜನರೇಟರ್ ಅಳವಡಿಸಲಾಗಿದ್ದು, ವಿದ್ಯುತ್ ಕಡಿತವಾದರು ಯಾವುದೇ ತೊಂದರೆ ಆಗುವುದಿಲ್ಲ. ಇದಲ್ಲದೇ ICU ಉಪಕರಣಗಳಿಗೆ UPS Backup ಅಳವಡಿಸಲಾಗಿದೆ.

ಬಿಮ್ಸ್ ಆಸ್ಪತ್ರೆ ಆವರಣದಲ್ಲಿ ಜನತಾ ಬಜಾರ್ ಜನರಿಕ್ ಮಳಿಗೆ ಇದ್ದು ಹಾಗೂ ರೋಗಿಗಳಿಗೆ ಅವಶ್ಯಕವಿರುವ ಎಲ್ಲ ಔಷಧಿಗಳನ್ನು ಉಚಿತವಾಗಿ ಬಿಮ್ಸ್ ಸಂಸ್ಥೆಯಿಂದ ನೀಡಲಾಗುತ್ತಿದೆ.

ಲೋಕಾಯುಕ್ತ ಅಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿದ್ದು ಒಂದು ವರ್ಷಕ್ಕಿಂತ ಹೆಚ್ಚು ಅವಧಿ ಮೀರಿದ ಬಹಳಷ್ಟು ಔಷಧಿಗಳು ಇನ್ನೂ ಬಳಕೆಯಲ್ಲಿರುವುದರ ಕುರಿತು ಯಾವುದೇ ಆಕ್ಷೇಪಣೆ/ ಷರಾ ನೀಡಿರುವುದಿಲ್ಲ. District Drug Warehouse ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲ.

**ಕಡತ ಸಂಖ್ಯೆ: ಎಂಇಡಿ 413 ಎಂಎಂಸಿ 2025**

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.